**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ**
**ಸಿ.ಸಿ. 689/2019**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.** **ಡಿ ಡಬ್ಲ್ಯೂ.01**
**ದಿನಾಂಕಃ** 08.11.2024

**ಪಾಟೀ ಸವಾಲುಃ ಪಿರ್ಯಾದಿ ಪರ ಶ್ರೀ ಆರ್ ಪಿ ವಕೀಲರಿಂದಃ**

ನಾನು ದ್ವಿತೀಯ ಪಿಯುಸಿ (ವಿಜ್ಞಾನ ವಿಭಾಗ) ವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನಾನು ರಿಯಲ್ ಎಸ್ಟೇಟ್ ವ್ಯವಹಾರ ಮಾಡುತ್ತೇನೆ ಎಂದರೆ ಸರಿ. ಆದ್ದರಿಂದ ನನಗೆ ಚೆಕ್ ಗಳ ಹಾಗೂ ಬ್ಯಾಂಕ್ ವ್ಯವಹಾರದ ಬಗ್ಗೆ ಮಾಹಿತಿ ಇದೆ ಎಂದರೆ ಸರಿ. ಸಾಮಾನ್ಯವಾಗಿ ವೈಯಕ್ತಿಕವಾಗಿ ಹಣ ಪಡೆಯಲು ಬರೆಯುವ ಚೆಕ್ ಸೆಲ್ಫ ಚೆಕ್ ಎಂದರೆ ಸರಿ. ಸೆಲ್ಫ ಚೆಕ್‌ಗಳು ಅದರ ಮೇನ್ ಬ್ರ್ಯಾಂಚ್ (ಖಾತೆಯನ್ನು ಹೊಂದಿನ ಬ್ಯಾಂಕ್) ಮಾತ್ರ ನಗದೀಕರಣ ಆಗುತ್ತದೆ ಎಂದರೆ ಸರಿ. ನಿಪಿ.1 ರಲ್ಲಿರುವ ನಿಪಿ.1 (ಎ) ಸಹಿ ನನ್ನದು ಎಂದರೆ ಸರಿ. ನಿಪಿ.1 ಪಿರ್ಯಾದಿಯವರ ಹೆಸರಿಗೆ ಡ್ರಾ ಆಗಿದೆ ಎಂದರೆ ಸರಿ. ನಿಪಿ.3, ನಿಪಿ.1 ನಗದೀಕರಣವಾಗದೇ ಹಿಂತಿರುಗಿದ ಬಗ್ಗೆ ಇರುವ ಹಿಂಬರಹ ಎಂದರೆ ಸರಿ. ಪಿರ್ಯಾದಿಗೆ 2 ಚೆಕ್ ಗಳನ್ನು ಭದ್ರತೆಗಾಗಿ ನೀಡಿದ ಬಗ್ಗೆ ನಾನು ಯಾವುದೇ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ . ನನ್ನ ಮುಖ್ಯ ವಿಚಾರಣೆಯಲ್ಲಿ ನನಗೆ ಬ್ಯಾಂಕ್ ನಿಂದ ಕರೆ ಬಂದಿದೆ ಎಂದು ಹೇಳಿದ್ದು ಸದರಿ ಕರೆ ಬೆಳಗಾವಿ ಬ್ಯಾಂಕ್ ಶಾಖೆಯಿಂದ ಬಂದಿತ್ತು. ಸದರಿ ಕರೆ ಬಂದಾಗ ನಾನು ಬ್ಯಾಂಕಿನವರಿಗೆ ಚೆಕ್ ನ್ನು ಶ್ರೀಕಾಂತ ರವರಿಗೆ ನಗದೀಕರಣ ಮಾಡಲು ತಿಳಿಸಿದ್ದನು. ಸದರಿ ಶ್ರೀಕಾಂತ ಪಿರ್ಯಾದಿಗೆ ಪರಿಚಯಸ್ಥರಲ್ಲ ಎಂದರೆ ಸರಿಯಲ್ಲ. ನಾನು ಮತ್ತು ಶ್ರೀಕಾಂತ ಸೇರಿಕೊಂಡು ಚೆಕ್ ನ ಮೊತ್ತವನ್ನು ಲಪಟಾಯಿಸಲು ಈ ರೀತಿ ಕಥೆ ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ.

ನನ್ನ ಮತ್ತು ಪಿರ್ಯಾದಿ ನಡುವೆ ದಿಃ 10.09.2014 ರಂದು ಪ್ಲಾಟ್ ನಂ. 3 ನ್ನು 5,50,000/- ರೂ ಗೆ ಮಾರಾಟ ಮಾಡಲು ಒಪ್ಪಂದ ಆಗಿತ್ತು ಎಂದರೆ ಸರಿ. ಸದರಿ ಆಸ್ತಿ ಅಗ್ರಿಕಲ್ಚರಲ್ ಲ್ಯಾಂಡ್ ಆಗಿರುವುದರಿಂದ ಅದನ್ನು ನೋಂದಾಯಿಸಲು ಬರುತ್ತಿರಲಿಲ್ಲ ಎಂದರೆ ಸರಿ. ಆದಕಾರಣ ನೊಂದಾವಣೆ ರಹಿತ ಒಪ್ಪಂದ ಮಾಡಿಕೊಂಡಿದ್ದೆವು ಎಂದರೆ ಸರಿ. ಈ ರೀತಿ ನೂಂದಾವಣೆ ಆಗದ ಕಾರಣ ಪಿರ್ಯಾದಿದಾರರಿಗೆ ಸಾಲ ಪಡೆಯಲು ಕಷ್ಟ ಆಗುತ್ತದೆ ಎಂದು ಲೇಔಟ್ ಮಾಡಿ ನೋಂದಾವಣಿ ಮಾಡಿಕೊಡಿ ಎಂದು ಕರೆ ಮಾಡಿ ತಿಳಿಸಿದ್ದರು ಎಂದರೆ ಸರಿಯಲ್ಲ. ನಂತರ ಲೇಔಟ್ ಆಗದೇ ಇದ್ದ ಕಾರಣ ಸದರಿ ಜಮೀನು ಬೇಡ ಎಂದು ಪಿರ್ಯಾದಿ ನನಗೆ ಹೇಳಿದ್ದರು ಎಂದರೆ ಸರಿ. ಈ ಕುರಿತು ಮಾತುಕತೆಗೆ ದಿಃ 25.02.2019 ರಂದು ಅತಿಶ, ಮೇಘರಾಟ, ಶ್ರೀ ರಥ ಮೆಹರ್ ವಾಡೆ ಬೆಳಗಾವಿಗೆ ಬಂದಿದ್ದರು ಎಂದರೆ ಸರಿ. ಸದರಿ ಸಂದರ್ಭದಲ್ಲಿ ಸದರಿ ಒಪ್ಪಂದವನ್ನು ರದ್ದು ಪಡಿಸಿ ಅದರ ಪ್ರಯುಕ್ತ ಪಿರ್ಯಾದಿಗೆ 6 ಲಕ್ಷ ರೂ ಕೊಡಲು ಒಪ್ಪಂದ ಆಯಿತು ಎಂದರೆ ಸರಿ. ಸದರಿ ಹಣವನ್ನು ನಾನು ಪಿರ್ಯಾದಿಗೆ ನೀಡಿದ ಬಗ್ಗೆ ಯಾವುದೇ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ ಎಂದರೆ ಸರಿ. ನಿಪಿ.1 ಸದರಿ ಹಣದ ಪಾವತಿಗಾಗಿ

ನೀಡಿದ್ದು ಎಂದರೆ ಸರಿ ಸಾಕ್ಷಿಯು ಮುಂದುವರೆದು ನಾನು 2 ಚೆಕ್ ನ್ನು ನೀಡಿದ್ದೇನೆ ಎಂದು ನುಡಿಯುತ್ತಾರೆ. ಸದರಿ 6 ಲಕ್ಷ ರೂ ಹಣಕ್ಕೆ 2 ಚೆಕ್ ಗಳನ್ನು ತಿರುವಳಿಗಾಗಿ ನೀಡಿದ್ದೇನೆ ಎಂದು ತೋರಿಸಲು ಯಾವುದೇ ದಾಖಲಾತಿಯನ್ನು ಸಲ್ಲಿಸಿಲ್ಲ ಎಂದರೆ ಸರಿ. ಪಿರ್ಯಾದಿಗೆ ನೀಡಬೇಕಾದ 6 ಲಕ್ಷ ರೂಗಳ ಹಣದ ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳಲು 2 ಚೆಕ್ ನೀಡಿದ್ದೇನೆ ಎಂದು ಈ ರೀತಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ಮತ್ತು ಪಿರ್ಯಾದಿಯ ನಡುವಿನ ಒಪ್ಪಂದ ರದ್ದು ಆದ ಮೇಲೆ ಸದರಿ ಮೂಲ ಒಪ್ಪಂದದ ಪತ್ರವನ್ನು ಚೆಕ್ ನ್ನು ನೀಡಿದ್ದರಿಂದ ನಾನು ಮರಳಿ ಪಡೆದಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಪಿರ್ಯಾದಿಗೆ ನನಗೆ ಸದರಿ ಒಪ್ಪಂದ ಪತ್ರವನ್ನು ಮರಳಿ ನೀಡಿಲ್ಲ ಎಂದು ನುಡಿಯುತ್ತಾರೆ. ಪಿರ್ಯಾದಿ ಪತ್ರವನ್ನು ನೀಡದಿದ್ದಾಗ ಆ ಬಗ್ಗೆ ಅವರ ವಿರುದ್ಧ ಯಾವುದೇ ಕಾನೂನು ಕ್ರಮ ತೆಗೆದುಕೊಂಡಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಕೋವಿಡ್ 19 ಬಂದಿದ್ದರಿಂದ ನಾನು ಯಾವುದೇ ಕ್ರಮ ತೆಗೆದುಕೊಂಡಿಲ್ಲ ಎಂದು ನುಡಿಯುತ್ತಾರೆ. ನಿಪಿ.4 ಪಿರ್ಯಾದಿಗೆ ನನಗೆ ಕಳುಹಿಸಿದ ನೋಟಿಸ್ ಎಂದರೆ ಸರಿ. ಸದರಿ ನೊಟೀಸ್ ದಿಃ 15.05.2019 ರಂದು ನನಗೆ ಜಾರಿಯಾಗಿದೆ ಎಂದರೆ ಸರಿ. ಸದರಿ ನೋಟೀಸ್ ಜಾರಿಯಾದ ಸಂದರ್ಭದಲ್ಲಿ ಲಾಕ್ ಡೌನ್ ಇರಲಿಲ್ಲ ಎಂದರೆ ಸರಿ. ಸದರಿ ನೊಟೀಸ್ ಜಾರಿಯಾದ ನಂತರ ನಾನು ಪಿರ್ಯಾದಿಗೆ ನಿಪಿ.7 ರಂತೆ ಮರುಉತ್ತರ ನೀಡಿರುತ್ತೇನೆ ಎಂದರೆ ಸರಿ. ನಾನು ನನ್ನ ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳಲು ವಕೀಲರಿಗೆ ತಪ್ಪು ಮಾಹಿತಿ ನೀಡಿ ಸುಳ್ಳು ಮರುಉತ್ತರ ನೀಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ.1 ನ್ನು ಪಿರ್ಯಾದಿಗೆ ನೀಡಬೇಕಾದ 6 ಲಕ್ಷ ರೂಗಳ ಹಣಕ್ಕೆ ನೀಡಿದ್ದರೂ ಸಹ, ಸದರಿ ಹಣವನ್ನು ಮರುಪಾವತಿ ಮಾಡಿದ್ದೇನೆ, ಯಾವುದೇ ಹಣ ಕೊಡುವುದು ಬಾಕಿ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಿಪಿ.1 ನ್ನು ಪಿರ್ಯಾದಿಗೆ ನೀಡಿದ ನಂತರ ಅದನ್ನು ಎಷ್ಟು ದಿನಗಳ ನಂತರ ನಗದೀಕರಣಕ್ಕೆ ಹಾಜರುಪಡಿಸಲು ತಿಳಿಸಿದ್ದೀರಿ ಎಂದರೆ ಸಾಕ್ಷಿಯು ನಾನು 2 ಚೆಕ್ ಗಳನ್ನು ನೀಡಿದ್ದು 15 ದಿನಗಳ ನಂತರ ಬ್ಯಾಂಕಿಗೆ ಹಾಜರುಪಡಿಸಲು ಹೇಳಿದ್ದೆನು ಎಂದು ನುಡಿಯುತ್ತಾರೆ. ನಿಪಿ.1 ನ್ನು, 1 ವರೆ ತಿಂಗಳ ನಂತರ ನಗದೀಕರಣಕ್ಕೆ ಹಾಜರುಪಡಿಸಲು ತಿಳಿಸಿದ್ದೆನು ಎಂದರೆ ಸರಿಯಲ್ಲ. ಈ ರೀತಿ ಹೇಳಿದ್ದರೂ ಸಹ ನನ್ನ ಬ್ಯಾಂಕ ಖಾತೆಗೆ ಚೆಕ್ ನ್ನು ನಗದೀಕರಣ ಮಾಡಬಾರದು ಮನವಿ ನೀಡಿರುತ್ತೀರಾ ಎಂದರೆ ಸರಿ. ಸಾಕ್ಷಿಯು ಮುಂದುವರೆದು 2 ನೆ ಚೆಕ್ ನ್ನು ನಗದೀಕರಣ ಮಾಡಬಾರದು ಎಂದು ಮನವಿ ಸಲ್ಲಿಸಿರುತ್ತೆನೆ ಎಂದು ನುಡಿಯುತ್ತಾರೆ. ನಾನು ಪಿರ್ಯಾದಿಗೆ ನಿಪಿ.1 ಚೆಕ್ ನ್ನು ಮಾತ್ರ ನೀಡಿದ್ದರು ಸಹ 2 ಚೆಕ್ ಗಳನ್ನು ನೀಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

Sd/

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು

ಮತ್ತು ಜೆಎಂಎಫ್‌ಸಿ, ಹರಿಹರ